ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಪಠ್ಯ ಪುಸ್ತಕಗಳ ಬಿಡುಗಡೆ ಮಾಡುವ ಬಗ್ಗೆ

೧೧೭. ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಪಠ್ಯ ಪುಸ್ತಕಗಳು ಧಾರವಾಡ ಉಗ್ರಾಣದಲ್ಲಿ ಸಾಕಷ್ಟು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಪಠ್ಯಪುಸ್ತಕಗಳನ್ನು ಬಿಡುಗಡೆ ಮಾಡದೆ ಇರಲು ಕಾರಣಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಈ ವರ್ಷದ ಮೇ ತಿಂಗಳಿನಿಂದಲೇ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಲಾಯಿತು.

ಬರಗಾಲದಿಂದ ತೊಂದರೆಗೊಳಗಾದ ಅಡಿಕೆ ಮತ್ತು ತೆಂಗು ಬೆಳೆಗಾರರಿಗೆ ಪರಿಹಾರ ಒದಗಿಸುವ ಬಗ್ಗೆ.

(೨೫೪) ಶ್ರೀ ಎನ್. ಶಿವರಾವ್ (ಬಂಟವಾಳ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೃಷಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಈ ವರ್ಷ ಬರಗಾಲದಿಂದ ತೊಂದರೆಗೆ ಒಳಗಾಗಿರುವ ಅಡಿಕೆ ಹಾಗೂ ತೆಂಗು ಬೆಳೆಗಾರರಿಗೆ ಸರ್ಕಾರದವರು ಪರಿಹಾರ ರೂಪದಲ್ಲಿ ಸಹಾಯ ಮಾಡುವರೆ ?

(ಆ) ಹಾಗಿದ್ದಲ್ಲಿ ಯಾವ ರೂಪದಲ್ಲಿ ಸಹಾಯ ಮಾಡಲಾಗುವುದು ?

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ (ಪಶುಸಂಗೋಪನೆ ಪಶುವೈದ್ಯ ಮತ್ತು ತೋಟಗಾರಿಕೆ ಸಚಿವರು).—

(ಅ) ಅಂತಹ ಪ್ರಸ್ತಾವನೆ ಯಾವುದೂ ಈಗ ಸರಕಾರದ ಮುಂದೆ ಇರುವುದಿಲ್ಲ.

(ಆ) ಉದ್ಭವಿಸುವುದಿಲ್ಲ

ಲಕ್ಕವಳ್ಳಿಯಲ್ಲಿ ಗ್ರಾಮಸೇವಕರ ಮತ್ತು ಕೃಷಿ ಸಹಾಯಕರ ವಸತಿ ಮತ್ತು ಕಛೇರಿ ಕಟ್ಟಡದ ವಿಚಾರ.

೨೯೨. ಶ್ರೀ ಬಿ. ತಿಪ್ಪಯ್ಯ (ಮೂಡಿಗೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೃಷಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿಯಲ್ಲಿ ಗ್ರಾಮಸೇವಕರ ಮತ್ತು ಕೃಷಿ ಸಹಾಯಕರ ವಸತಿ ಮತ್ತು ಕಛೇರಿ ಕಟ್ಟಡ ಮಂಜೂರಾಗಿದ್ದರೂ ಇನ್ನೂ ಕಾರ್ಯಗತವಾಗದಿರಲು ಕಾರಣಗಳೇನು ?

ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು).—

(ಅ) ಲಕ್ಕವಳ್ಳಿಯನ್ನು ಗ್ರಾಮ ಸೇವಕರ ಮತ್ತು ಕೃಷಿ ಸಹಾಯಕರ ವಸತಿ ಮತ್ತು ಕಛೇರಿ ಕಟ್ಟಡ ಕಟ್ಟಲು ಆಯ್ಕೆ ಮಾಡಿಲ್ಲ.